– 'ಶಿ ವಿಲ್ ಡು ದಟ್' ಎನ್ನುತ್ತಿದ್ದರು. ಆದರೆ, ಭಾರತದ ಅಥ್ಲೀಟ್ ಎಲ್ಲರನ್ನೂ ಹಿಂದಿಕ್ಕಿ, 52.09 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕವನ್ನು ಕೊರಳಿಗೇರಿಸಿಕೊಂಡಾಗ ಎಲ್ಲೆಡೆ ಅರೆಕ್ಷಣ ಮೌನ.

400 ಮೀಟರ್ ಟ್ರ್ಯಾಕ್ ಓಟದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಅಥ್ಲೀಟ್ ಒಬ್ಬರು ಪಡೆದ ಮೊಟ್ಟ ಮೊದಲ ಚಿನ್ನದ ಪದಕವದು. ಆ ಸಾಧಕಿಯೇ ಹಿಮಾದಾಸ್. ಆಕೆ, ಆ ಚಿನ್ನದ ಪದಕವನ್ನು ಒಳಗೊಂಡು 20 ದಿನಗಳ ಅಂತರದಲ್ಲಿ 5 ಚಿನ್ನದ ಪದಕಗಳನ್ನು ಗೆದ್ದು ಭಾರತದ ಕೀರ್ತಿ ಪತಾಕೆಯನ್ನು ಎತ್ತರಕ್ಕೇರಿಸಿದ್ದರು.

ಜುಲೈ 2ರಂದು ಪೋಲೆಂಡ್‌ನಲ್ಲಿ ನಡೆದಿದ್ದ ಪೊಜ್ನಾನ್ ಅಥ್ಲೆಟಿಕ್ಸ್ ಪ್ರಿಕ್ಸ್‌ನಲ್ಲಿನ 200 ಮೀಟರ್ ಓಟ, ಜುಲೈ 8ರಂದು ಕುಟ್ನೊ ಅಥ್ಲೆಟಿಕ್ಸ್ ಮೀಟ್‌ನಲ್ಲಿ ಸ್ಪರ್ಧೆ, ಜುಲೈ 13ರಂದು ಜೆಕ್ ರಿಪಬ್ಲಿಕ್‌ನಲ್ಲಿ ನಡೆದ ಕ್ಲಾಡ್ನೋ ಅಥ್ಲೆಟಿಕ್ಸ್ ಮೀಟ್ ಮತ್ತು ಜುಲೈ 18ರಂದು ನಡೆದ ಟ್ಯಾಬರ್ ಅಥ್ಲೆಟಿಕ್ಸ್ ಮೀಟ್ – ಎಲ್ಲದರಲ್ಲೂ ಹಿಮಾಗೆ ಚಿನ್ನ! ಒಬ್ಬ ಅಥ್ಲೀಟ್ ತನ್ನ ಫಿಟ್‌ನೆಸ್ ಕಾಪಾಡಿಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೀಗೆ ಸತತವಾಗಿ ಅದ್ಭುತ ನಿರ್ವಹಣೆ ತೋರಿ ಚಿನ್ನದ ಪದಕಗಳನ್ನು ಜಯಿಸಿರುವುದು ಭಾರತದ ಮಟ್ಟಿಗೆ ಒಂದು ಅಪೂರ್ವ ದಾಖಲೆ.

ಹಿಮಾ ದಾಸ್ ಅವರದು ಅಸ್ಸಾಂನ ನಾಗಾಂವ್ ಜಿಲ್ಲೆಯ ಧಿಂಗ್ ಎನ್ನುವ ಪುಟ್ಟ ಹಳ್ಳಿ. ಅಪ್ಪ ರಂಜಿತ್ ದಾಸ್ ಮತ್ತು ತಾಯಿ ಜೊನಿಲಾರ ಹಿರಿಯ ಮಗಳು ಆಕೆ. ಇಬ್ಬರು ತಂಗಿಯರು ಮತ್ತು ಒಬ್ಬ ತಮ್ಮ ಸೇರಿದಂತೆ 6 ಜನರ ಕೂಡು ಕುಟುಂಬ ಅವರದು. ಪುಟ್ಟ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಹೇಗೋ ಬದುಕು ತೂಗಿಸಿಕೊಂಡು ಹೋಗುತ್ತಿದ್ದ ಆ ಕುಟುಂಬಕ್ಕೆ ಕ್ರೀಡಾ ಹಿನ್ನೆಲೆ ಇಲ್ಲವೇ ಇಲ್ಲ. ಅವರಿದ್ದ ಗ್ರಾಮದಲ್ಲಿ ಕ್ರೀಡಾ ತರಬೇತಿಗೆ ಬೇಕಾದ ಸೌಕರ್ಯಗಳೂ ಇಲ್ಲ.

ಹಿಮಾ ಸಣ್ಣವಳಿದ್ದಾಗ ಗದ್ದೆ ಬಯಲಿನಲ್ಲಿ ವೇಗವಾಗಿ ಬರಿಗಾಲಿನಲ್ಲಿ ಓಡಾಡುತ್ತಿದ್ದುದನ್ನು ನೋಡಿದ ಅಪ್ಪನಿಗೆ ಮಗಳಲ್ಲಿ ನಾಳಿನ ಚಾಂಪಿಯನ್ ಚಿತ್ರ ಕಾಣಿಸಿತ್ತಂತೆ. ಆದರೆ ಆ ಬಗೆಗೆ ದೊಡ್ಡ ಕನಸೇನೂ ಅವರಿಗಿರಲಿಲ್ಲ. ಹಾಗೆ ನೋಡಿದರೆ ಹಿಮಾ ಶಾಲೆಯಲ್ಲಿ ಹುಡುಗರ ಜೊತೆ ಕಾಲ್ಚೆಂಡು ಆಡುತ್ತಾ ಫುಟ್ಬಾಲ್ ಆಟಗಾರ್ತಿಯಾಗುವ ಕನಸು ಕಂಡಿದ್ದಳು.

2016ರಲ್ಲಿ ಶಾಲಾ ಮಟ್ಟದಲ್ಲಿ ಓಟದ ಸ್ಪರ್ಧೆಯಲ್ಲಿ ಗೆದ್ದು ಗುರುತಿಸಿಕೊಂಡ ಹಿಮಾಳನ್ನು ತರಬೇತಿಗೆ ಕಳಿಸುವಂತೆ ಶಿಕ್ಷಕರು ಸಲಹೆ ನೀಡಿದರೂ ಆರ್ಥಿಕ ತೊಂದರೆಯಿಂದಾಗಿ ಅದು ಸಾಧ್ಯವಾಗಿರಲಿಲ್ಲ. ಆ ಬಳಿಕ ಆಕೆ ಜಿಲ್ಲಾ ಮಟ್ಟದಲ್ಲಿ ಗೆದ್ದಿದ್ದಳು. 2017ರಲ್ಲಿ ಸ್ಪರ್ಧೆಯೊಂದರಲ್ಲಿ ಹಿಮಾ ವೇಗವಾಗಿ ಓಡುತ್ತಿದ್ದುದನ್ನು ಗಮನಿಸಿದ ಆಕೆಯ ಮೊದಲ ನಿಪೋ ದಾಸ್ ಎನ್ನುವ ಕೋಚ್‌ಗೆ ಹಿಮಾದಾಸ್‌ಳಲ್ಲಿ ಖಂಡಿತಾ ಒಂದು ವಿಶೇಷ ಓಟದ ಸಾಮರ್ಥ್ಯ ಇದೆ ಅನ್ನಿಸಿತ್ತು. ತಡಮಾಡದೆ ಅವಳ ಕುಟುಂಬದವರನ್ನು ಒಪ್ಪಿಸಿ ಹಿಮಾಳನ್ನು ಅವಳ ಊರಿನಿಂದ 150 ಕಿ.ಮೀ. ದೂರದಲ್ಲಿದ್ದ ಗುವಾಹಟಿಯ ವಸತಿ ನಿಲಯವೊಂದಕ್ಕೆ ಸೇರಿಸಿ, ಅಲ್ಲಿ ಅವಳಿಗೆ ಓಟದ ತಂತ್ರಗಳನ್ನು ಹೇಳಿಕೊಡಲಾರಂಭಿಸಿದರು. ಆಕೆ ಹಿಮಾ ಅವರ ಓಟದ ಮೊದಲ ಗುರು.



ಹೆಮ್ಮೆಯ ಸಾಧಕಿಯರು: ಪಿ.ಟಿ. ಉಷಾ ಜೊತೆ ಹಿಮಾ

ಸ್ವಲ್ಪ ಕಾಲದಲ್ಲೇ ಓಟದ ಪಟ್ಟುಗಳನ್ನು ಕಲಿತುಕೊಳ್ಳುವುದರಲ್ಲಿ ಹಿಮಾ ಯಶಸ್ವಿಯಾದಳು. ಆಕೆಗೆ ವರವಾಗಿದ್ದದ್ದು ನಿಸರ್ಗದತ್ತವಾಗಿ ದೊರೆತ ದೈಹಿಕ ಸಾಮರ್ಥ್ಯ ಮತ್ತು ಆತ್ಮವಿಶ್ವಾಸ. ನೋಡ ನೋಡುತ್ತಿದ್ದಂತೆ ಹಿಮಾ ರಾಷ್ಟ್ರೀಯ ಅಥ್ಲೆಟಿಕ್ಸ್ ಮೀಟ್‌ನಲ್ಲಿ ಪದಕಗಳನ್ನು ಜಯಿಸಲಾರಂಭಿಸಿದ್ದಳು. ರಾಷ್ಟ್ರೀಯ ತಂಡದ ಕೋಚ್ ಬಸಂತ್ ಸಿಂಗ್ ಅವಳಲ್ಲಿ ಮತ್ತಷ್ಟು ಕಸುವನ್ನು ತುಂಬಿದರು.

2018ರಲ್ಲಿ ಫಿನ್ಲೆಂಡಿನಲ್ಲಿ ನಡೆದ 'ಐಎಎಎಫ್ ಅಂಡರ್ 20' ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ 400 ಮೀಟರ್ ಓಟದಲ್ಲಿ ಪಾಲುಗೊಳ್ಳುವ ಮುನ್ನ ನಿಪೋ ದಾಸ್ ಬಳಿ ಹಿಮಾ ಹೇಳಿದ್ದಳಂತೆ. 'ಸರ್ ಮೊದಲು ಎಲ್ಲರಿಗೂ ಮುಂದೆ ಹೋಗಲು ಬಿಡುತ್ತೇನೆ. ಆದರೆ ಕೊನೆಯ ನೂರು ಮೀಟರ್ ಅಂತರದಲ್ಲಿ ನಾನೊಬ್ಬಳೇ ಮುಂದಿರಬೇಕು'. ಆ ಮಾತು ಅವಳಲ್ಲಿನ ಆತ್ಮವಿಶ್ವಾಸ ಮತ್ತು ಸ್ವಯಂ ಸಾಮರ್ಥ್ಯದ ಬಗೆಗಿದ್ದ ನಂಬಿಕೆಗೆ ಸಾಕ್ಷಿಯಾಗಿತ್ತು. ಅಂದು ನಡೆದಿದ್ದು ಕೂಡ ಹಾಗೆಯೇ. ಮೊದಲ ಮುನ್ನೂರು ಮೀಟರ್ ಆಗುವಾಗ ಹಿಮಾ ಹೆಚ್ಚೆಂದರೆ ನಾಲ್ಕು ಅಥವಾ ಐದನೇ ಸ್ಥಾನ ಬರಬಹುದೆಂದು ಭಾವಿಸಿದ್ದವರನ್ನೆಲ್ಲ ಅಚ್ಚರಿಗೆ ತಳ್ಳಿ, ಕೊನೆಯ 50–60 ಮೀಟರ್ ಬಾಕಿ ಇರುವಾಗ ಅದ್ಭುತ ಎನ್ನುವಂತೆ ತನ್ನ ವೇಗವನ್ನು ಹೆಚ್ಚಿಸಿಕೊಂಡು ಓಡಿ ಎಲ್ಲರನ್ನೂ ಹಿಂದಿಕ್ಕಿ ಮೊದಲ ಸ್ಥಾನ ಗಳಿಸಿದ್ದಳು. ಅಂದು ಹಿಮಾ ಗೆದ್ದ ತಕ್ಷಣ ತ್ರಿವರ್ಣ ಧ್ವಜಕ್ಕಾಗಿ ಹುಡುಕಾಡಿದ್ದು ಮತ್ತು ರಾಷ್ಟ್ರಧ್ವಜವನ್ನು ಹೊದ್ದುಕೊಂಡು ರಾಷ್ಟ್ರಗೀತೆ ಹಾಡುವಾಗ ಭಾವುಕಳಾಗಿ ಕಣ್ಣೀರಿಟ್ಟಿದ್ದನ್ನು ನೋಡಿದವರು, ಆ ಅಪೂರ್ವ ಕ್ಷಣವನ್ನು ಎಂದಿಗೂ ಮರೆಯಲಾರರು.

ಹಿಮಾಗೆ ತನ್ನ ತಾಯ್ನುಡಿ ಅಸ್ಸಾಮಿಯ ಜೊತೆ ಹಿಂದಿಯೂ ಗೊತ್ತು. ಇಂಗ್ಲಿಷ್ ಅಷ್ಟಕ್ಕಷ್ಟೆ. ಆದರೆ ಆಕೆಗೆ ಭಾಷೆ ತೊಡಕೆನಿಸಿಲ್ಲ. ಮೊದಲ ಬಾರಿ ಗುವಾಹಟಿಗೆ ತರಬೇತಿಗೆ ಬಂದಾಗ ಓಟಕ್ಕೆ ಅಗತ್ಯವಿದ್ದ ಸ್ಪೈಕ್ ಶೂಗಳು ಆಕೆಯ ಬಳಿ ಇರಲೇ ಇಲ್ಲ. ಸಾಮಾನ್ಯ ಶೂಗಳಲ್ಲೇ ಓಡಿ ಆಕೆ ಪದಕಗಳನ್ನು ಗೆದ್ದ ಉದಾಹರಣೆಗಳಿವೆ. ಅಭ್ಯಾಸ ಮಾಡುವಾಗ ಅದೆಷ್ಟೋ ಬಾರಿ ಬರಿಗಾಲಲ್ಲಿ ಓಡಿ ರಕ್ತ ಸುರಿಸಿಕೊಂಡಿದ್ದನ್ನು ಅವಳ ಸಹವರ್ತಿಗಳು ನೆನಪು ಮಾಡಿಕೊಳ್ಳುತ್ತಾರೆ. ಇದೀಗ ಪ್ರತಿಷ್ಠಿತ ಶೂ ಕಂಪನಿ ತನ್ನ ಶೂಗಳ ಮಾರಾಟಕ್ಕೆ ಹಿಮಾ ದಾಸ್‌ಳನ್ನೇ ಬ್ರಾಂಡ್ ಅಂಬಾಸಿಡರ್ ಮಾಡಿಕೊಂಡಿರುವುದಲ್ಲದೆ, ಆಕೆಯ ಹೆಸರಿನಲ್ಲಿ ಶೂಗಳನ್ನು ಕೂಡ ತಯಾರಿಸುತ್ತಿದೆ.

ಪ್ರಸ್ತುತ ಹಿಮಾ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಸಂಸ್ಥೆಯಲ್ಲಿ ಮಾನವ ಸಂಪನ್ಮೂಲ ಅಧಿಕಾರಿ. ಅಸ್ಸಾಂ ರಾಜ್ಯದ ಕ್ರೀಡಾ ರಾಯಭಾರಿಯೂ ಹೌದು. ಯೂನಿಸೆಫ್ ಇಂಡಿಯಾದ ರಾಯಭಾರಿಯಾಗಿಯೂ ಆಯ್ಕೆಯಾಗಿದ್ದಾರೆ.